**ದಿನಾಂಕಃ 14/03/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎಂ.ಪಿ ವಕೀಲರಿಂದಃ**

9. ನನ್ನ ತಂದೆ ತೀರಿಕೊಂಡು 40 ವರ್ಷ ಕಳೆದಿದೆ. ನನ್ನ ತಂದೆ ಜೀವಿತ ಕಾಲದಲ್ಲಿ ನನಗೂ ಮತ್ತು 1 ನೇ ಪ್ರತಿವಾದಿಗೂ ಆಸ್ತಿಗಳನ್ನು ಹಂಚಿಕೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಸ್ವತ್ತನ್ನು 2 ನೇ ಪ್ರತಿವಾದಿ ಕೊಂಡುಕೊಂಡ ಸ್ವತ್ತು ಎಂದರೆ ಸರಿ. ಯಾವ ದಿನಾಂಕದಂದು ಅದನ್ನು ಕ್ರಯಕ್ಕೆ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ನಾನು ಮತ್ತು 1 ನೇ ಪ್ರತಿವಾದಿ ವಿಭಾಗವಾದ ನಂತರ ಖರೀದಿಸಿದ್ದು ಎಂದರೆ ಸರಿಯಲ್ಲ. ಆದರೆ ಒಟ್ಟಿಗೆ ಇದ್ದಾಗ ಖರೀದಿಸಿದ್ದು. ನಾನು ಮತ್ತು 1 ನೇ ಪ್ರತಿವಾದಿ ಈಗ ಬೇರೆ ಬೇರೆ ಇದ್ದೇವೆ. ಒಟ್ಟಿಗೆ ಇದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಬೇರೆ ಬೇರೆ ವಾಸಿಸುತ್ತಿದ್ದೆವು, ಆದರೆ ಒಟ್ಟಿಗೆ ವ್ಯವಹಾರ ಮಾಡುತ್ತಿದ್ದೆವು.

10. ನನ್ನ ತಂದೆ ತೀರಿಕೊಂಡ ನಂತರ ನನಗೆ 2 ಎಕರೆ ಜಮೀನು ಮಾತ್ರ ಕೊಟ್ಟರು. ಬಾಕಿ ಆಸ್ತಿಗಳನ್ನು 1 ನೇ ಪ್ರತಿವಾದಿಯೇ ಇಟ್ಟುಕೊಂಡರು. ಪ್ರತಿವಾದಿಗಳ ಮಗ ಪೊಲೀಸ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ಆದರೆ ಅವರ ಸಂಬಳದಲ್ಲಿ ದಾವಾ ಐಟಂ ನಂ.1 ನ್ನು ಖರೀದಿಸಿದ್ದು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ ಆರ್.ಸಿ.ಸಿ ಮನೆ ಇದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರಲ್ಲಿ ಆರ್.ಸಿ.ಸಿ ಮನೆ ಇದೆ. ದಾವಾ ಷೆಡ್ಯೂಲ್ ಐಟಂ ನಂ.2 ರಲ್ಲಿ ಆರ್.ಸಿ.ಸಿ ಮನೆ ಇದೆ ಎಂದು ವಾದಪತ್ರದಲ್ಲಿ ತೋರಿಸಿದ್ದೇನೆ. ಆ ಮನೆ 2 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಆ ಮನೆಯನ್ನು ಕಟ್ಟಿ ಸುಮಾರು 15 ವರ್ಷ ಆಗಿದೆ. ಮನೆ ಕಟ್ಟಲು ದಾವಾ ಐಟಂ.ನಂ.2 ನ್ನು ಆಧಾರ ಮಾಡಿ ಸಾಲ ಪಡೆದಿಲ್ಲ. ಅವರ ಮಗನ ಸಂಬಳ ಮತ್ತು ಸಾಲ ಪಡೆದು ಸದರಿ ಮನೆಯನ್ನು ಕಟ್ಟಿದ್ದು ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿದ್ದಾಗ ಕಟ್ಟಿದ್ದು ಎಂದು ನುಡಿಯುತ್ತಾರೆ. ಪ್ರತಿವಾದಿಗಳು 1 ಎಕರೆ ಜಮೀನನ್ನು ಖರೀದಿಸಿ ಅಭಿವೃದ್ಧಿ ಪಡಿಸಿದ್ದು

ಅದನ್ನು ಸಹಿಸಲಾರದೇ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಈಗಾಗಲೇ ಭಾಗವಾಗಿದ್ದು ಆಸ್ತಿಯನ್ನು ಲಪಟಾಯಿಸಲು ಸುಳ್ಳುದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

11. ನನ್ನ ತಾಯಿ ತೀರಿಕೊಂಡು 9 ವರ್ಷ ಕಳೆದಿದೆ. ನನ್ನ ತಾಯಿ ತೀರಿಕೊಂಡ 3 ತಿಂಗಳಿಗೆ ಈ ದಾವೆ ಹೂಡಿದ್ದೇನೆ. ದಾವಾ ಐಟಂ ನಂ.1 ಮತ್ತು ಆರ್.ಸಿ.ಸಿ ಮನೆ ಸ್ತ್ರೀಸ್ವತ್ತಾಗಿದ್ದು ಅದರ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1 ನೇ ಐಟಂ ಸ್ವತ್ತನ್ನು ಖರೀದಿಸುವಾಗ ನಾನು ತಕರಾರು ಮಾಡಿರಲಿಲ್ಲ. ನನ್ನ ತಾಯಿ ಇದ್ದುದ್ದರಿಂದ ಆ ರೀತಿ ತಕರಾರು ಮಾಡಿರಲಿಲ್ಲ. ನಾನು ನನ್ನ ತಾಯಿಯ ಹೆಸರಿಗೆ ಸ್ವತ್ತು ಖರೀದಿಸಿ ಮತ್ತು ಮನೆಯನ್ನು ಕಟ್ಟಿ ಎಂದು ತಿಳಿಸಿರಲಿಲ್ಲ. ನನ್ನ ಪಾಲಿಗೆ ಬಂದ ಜಮೀನಿಗೆ ಖಾತೆ ಮಾಡಿಸಿಕೊಳ್ಳಲು ನನ್ನ ಅಣ್ಣ ತಿಳಿಸಿದ್ದರೂ ಸಹ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**